**ದಿನಾಂಕ : *22-08-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಎದರುದಾರರ ಪರವಾಗಿ ಶ್ರೀ. ಆರ್ ಹೆಚ್ ಕೆ ವಕೀಲರಿಂದ**

ನಾನು ಈ ಕೆಳಕಂಡ ದಾಖಲೆಗಳನ್ನು ಗುರುತಿಸುತ್ತೇನೆ.

ನಿಆರ್ -1 ಃ ಪ್ರ.ವ.ವ ಯ ದೃಢಿಕೃತ ಪ್ರತಿ.

ನಿಆರ್ -2 ಃ ದೂರಿನ ದೃಢಿಕೃತ ಪ್ರತಿ.

ನಿಆರ್ 3 ಃ ಎಮ್ ವಿ ವರದಿಯ ದೃಢಿಕೃತ ಪ್ರತಿ.

ಅರ್ಜಿಯನ್ನು ವಜಾಮಾಡಬೇಕೆಂದು ಕೋರುತ್ತೇನೆ.

**ಪಾಟೀ ಸವಾಲು ಃ ಅರ್ಜಿದಾರರ ಪರ ಎಂ.ವಿ.ಎ ವಕೀಲರಿಂದ**

ಪೋಲಿಸರು ದಾಖಲಿಸಿದ ಪ್ರ.ವ.ವರದಿಯಲ್ಲಿ (ಕ್ರೈಂ.ನಂ.40/19) ಕೆಎ-29 ಟಿಎ 6662 ಟ್ರ್ಯಾಕ್ಟರ ಅಪಘಾತ ಆಗಿರುತ್ತದೆ. ಪೋಲಿಸರು ತಾವು ಸಲ್ಲಿಸಿದ ದೋ.ಪಟ್ಟಿಯಲ್ಲಿ ಕೆಎ-29 ಟಿವಿ 7355 ಟ್ರ್ಯಾಕ್ಟರ ಅಪಘಾತ ಆಗಿರುತ್ತದೆ ಎಂದು ನಮೂದಿಸಿರುತ್ತಾರೆ. ಕೆಎ-29 ಟಿವಿ 7355 ಪಾಸಿಂಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಕೆಎ-29 ಟಿವಿ 7355 ಈ ವಾಹನವನ್ನು ನಾನು ಚಲಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಸದರಿ ವಾಹನವನ್ನು ಚಲಾಯಿಸುತ್ತಿದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಎ-29 ಟಿವಿ 7355 ಇದನ್ನು ನನ್ನ ತಮ್ಮ ಚಲಾಯಿಸುತ್ತಿದ್ದ ಎಂದರೆ ಸಾಕ್ಷಿದಾರರು ಯಾರೂ ಚಲಾಯಿಸಿರುವುದಿಲ್ಲ ಎಂದು ಹೇಳುತ್ತಾರೆ. 2 ನೇ ಎದುರುದಾರರ ಮೇಲೆ ಪೋಲಿಸರು ಪಾಸಿಂಗ್ ಇರಲಾರದ ವಾಹನವನ್ನು ಚಲಾಯಿಸಿರುತ್ತಾರೆ ಎಂದು ದೊ.ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಗಾಡಿಯು ಅಪಘಾತವಾಗಿದ್ದು, ಪರಿಹಾರದ ಹಣವನ್ನು ಕೊಡಲು ನಾವು ಭಾದ್ಯಸ್ತರು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಕಾಲು ಮುರಿದು 3 ಲಕ್ಷ ರೂ.ಗಳನ್ನು ವೈದ್ಯಕೀಯ ಖರ್ಚು ಮಾಡಿದ್ದು, ಅದನ್ನು ಕೊಡಲು ನಾವು ಭಾದ್ಯಸ್ತರು ಇರುತ್ತೇವೆ ಎಂದರೆ ಸಾಕ್ಷಿದಾರರು ರಾಮನಗೌಡ ಕನಕನಗೌಡ ಗೌಡರ ಎನ್ನುವವರು ಕೆಎ-29 ಟಿಎ 6662 ಈ ವಾಹನದ ಮಾಲೀಕರಿಗೆ ಹಣ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಈ ಕುರಿತು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಅರ್ಜಿದಾರರಿಗೆ ಅಪಘಾತ ಆಗಿದ್ದರಿಂದ ಅವರ ಜೀವನ ದುಸ್ತರ ಆಗಿದ್ದು, ಹೀಗಾಗಿ ಅರ್ಜಿದಾರರಿಗೆ ಪರಿಹಾರದ ಹಣವನ್ನು ಕೊಡಲು ನಾವು ಭಾದ್ಯಸ್ತರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.